# <u>ಕಕ್ಷಾ ತಾರತಮ್ಯ</u>

ಶ್ರೀ ಮಧ್ವಾಚಾರ್ಯರು ಪರಮಾತ್ಮನಿಂದ ಮೊದಲು ಮಾಡಿ ಮನುಷ್ಯೋತ್ತಮರ ವರೆಗೆ ಅವರವರ ಗುಣ ತಾರತಮ್ಯಾನುಸಾರವಾಗಿ ಸ್ಥಾನ ಭೇದಗಳನ್ನು ಪ್ರಾಚೀನ ಪ್ರಮಾಣಗಳಿಂದ ವಿವರಿಸಿರುವರು. ಇವುಗಳಿಗೆ "ಕಕ್ಷ" ಎಂದು ಪರಿಭಾಷಾ ನಾಮವಿದೆ. ಒಟ್ಟು ೩೨ ಕಕ್ಷಗಳು.

ಅವುಗಳ ವಿವರಣೆ ಈ ಕೆಳಗಿನಂತೆ ಇದೆ:

೧. ಶ್ರೀ ಹರಿ
೨. ಶ್ರೀ ಮಹಾಲಕ್ಷ್ಮೀ
೩. ಬ್ರಹ್ಮ ವಾಯು
೪. ಸರಸ್ವತಿ ಭಾರತೀ
೫. ಶೇಷ, ಗರುಡ, ರುದ್ರ
೬. ಶ್ರೀ ಕೃಷ್ಣನ ಅಷ್ಟ ಮಹಿಷಿಯರು - ಜಾಂಬವತಿ, ಕಾಳಿಂದಿ, ಲಕ್ಷಣಾ, ನೀಲಾ, ಭದ್ರಾ, ಮಿತ್ರವಿಂದಾ
೭. ವಾರುಣಿ (ಶೇಷ ಪತ್ನಿ), ಸೌಪರ್ಣಿ (ಗರುಡ ಪತ್ನಿ), ಪಾರ್ವತಿ (ರುದ್ರ ಪತ್ನಿ)
೮. ಇಂದ್ರ, ಕಾಮ
೯. ಅಹಂಕಾರಿಕ ಪ್ರಾಣ
೧೦. ಸ್ವಾಯಂಭುವ ಮನು, ಬೃಹಸ್ಪತಿ, ದಕ್ಷ ಕಾಮ ಪುತ್ರ, ಅನಿರುದ್ಧ, ಶಚಿ, ರತಿ
೧೧. ಪ್ರವಹವಾಯು (ವಾಯುವ್ಯ ದಿಕ್ಕಿಗೆ ಅಭಿಮಾನಿ)
೧೨. ಸೂರ್ಯ, ಚಂದ್ರ, ಯಮ, ಶತರೂಪಾದೇವಿ (ಸ್ವಾಯಂಭುವ ಮನುವಿನ ಪತ್ನಿ)
೧೩. ವರುಣ
೧೪. ನಾರದ ಮಹರ್ಷಿ
೧೫. ಭೃಗು ಋಷಿ, ಅಗ್ನಿ, ದಕ್ಷ ಪತ್ನಿ ಪ್ರಸೂತಿ, ಪ್ರಹಲ್ಲಾದ (ವಾಯು ದೇವರ ಆವೇಶ ಹಾಗು ನಾರದರ ಅನುಗ್ರಹದಿಂದ ಇವರಿಗೆ ಸಮನೆನಿಸುವನು)
೧೬. ವೈವಸ್ವತ ಮನು, ವಿಶ್ವಾಮಿತ್ರ, ಸಪ್ತ ಋಷಿಗಳು (ಮರೀಚಿ, ಅತ್ರಿ, ಪುಲಸ್ಯ ಪುಲಹ, ಕ್ರತು, ವಸಿಷ್ಠ ಮತ್ತು ಅಂಗೀರಸ
೧೭. ಮಿತ್ರ ನಾಮಕ ಸೂರ್ಯ, ನಿರಋತಿ, ತಾರಾ, ಪ್ರವಹ ಪತ್ನಿ ಪ್ರಾವಹಿ
೧೮. ವಿಷ್ವಕ್ಸೇನಾ (ಪ್ರಧಾನ ವಾಯುಪುತ್ರ ಮತ್ತು ದೇವಸೇನಾ ನಾಯಕ), ಕುಬೇರ, ಗಣಪತಿ, ೮೫ ಜನ ಶೇಷ ಶತಸ್ಥರು (೪೭ ಜನ ವಿಶ್ವೇ ದೇವತೆಗಳು, ೭ ಜನ ವಸುಗಳು, ಋಭು, ದ್ಯಾವಾ, ಪೃಥ್ವಿ ೨ ಜನ ಅಶ್ವಿನಿ ದೇವತೆಗಳು (ನಾಸತ್ಯ, ದಸತಿ), ಸೋಮ ಪಾನಾರ್ಹರಾದ ೧೦೦ ಜನ ದೇವತೆಗಳ ಸಮೂಹಕ್ಕೆ ಶತಸ್ಥ ದೇವಗಣ ಎಂದು ಹೆಸರು. ಇವರಲ್ಲಿ ೧೪ ಜನ ದೇವತೆಗಳು ಮೇಲಿನ

ಕಕ್ಷೆಯಲ್ಲಿ ಉಕ್ತರು ಇನ್ನೊಬ್ಬ ದೇವತೆ ಕವ್ಯ ನಾಮಕ ಅಗ್ನಿ ೧೯ ನೇಯಾ ಕಕ್ಷೆಯಲ್ಲಿ ಇದ್ದಾನೆ. ಉಳಿದ ೮೫ ಜನ ಶೇಷ ಶತಸ್ಥರೆಂದು ಕರೆಸಿಕೊಳ್ಳುತ್ತಾರೆ. (ಈ ೧೪ ಜನ ದೇವತೆಗಳ ವಿವರ ಈ ರೀತಿಯಾಗಿದೆ: ಪ್ರಧಾನವಾಯು, ಪಾರ್ವತಿ ಪತಿ ರುದ್ರ, ಅಹಂಕಾರಿಕ ಪ್ರಾಣ, ಬೃಹಸ್ಪತಾಚಾರ್ಯ, ಪ್ರವಹವಾಯು, ೬ ಜನ ಸೂರ್ಯರು, ಚಂದ್ರ, ಯಮ, ಅಷ್ಟ ವಸುಗಳಲ್ಲಿ ಪ್ರಧಾನ ನಾದ ಅಗ್ನಿ).

೧೯. ಇಂದ್ರ ಪುತ್ರ ಜಯಂತ, ವಾಯು ಪುತ್ರ ಮರೀಚಿ, ಅಗ್ನಿ ಪುತ್ರ ಪಾವಕ, ಕರ್ಮಜ ದೇವತೆಗಳಾದ ೭ ಜನ ಇಂದ್ರರು (ಬಲಿ ಚಕ್ರವರ್ತಿ ಮೊದಲಾದವರು), ೧೧ ಜನ ಮನುಗಳು (ಇವರಲ್ಲಿ ತಾಪಸ, ಸ್ವಾಯಂಭುವ, ವೈವಸ್ವತ ಮನುಗಳು, ಮೇಲಿನ ಕಕ್ಷೆಯಲ್ಲಿ ಬರುತ್ತಾರೆ. ತಾಪಸ ಮನು ಸಾಕ್ಷಾತ್ ಶ್ರೀ ಹರಿ), ೯೦ ಜನ ಋಷಿಗಳು (೧೦ ಸಂನ್ಯಾಸಿಗಳು + ೮೦ ಜನ ಗೃಹಸ್ಥರು ಉಚಿಥ್ಯ ಚ್ಯವನ, ಕರ್ದಮ, ಮೊದಲಾದವರು), ೧೦೦ ಜನ ರಾಜರು (ಶತಪೂಣ್ಯ ಶ್ಲೋಕರು, ಹೈಹಯ, ಪರೀಕ್ಷಿತ, ನಹುಷ, ನಾಭಿ, ಪೃಥು, ಪ್ರಿಯವ್ರತ, ಭರತ, ಮಾಂಧಾತಾ, ಧ್ರುವ, ಮೊದಲಾದವರು), ಮಂಗಳ, ರಾಹು, ಕೇತು, ಶುಕ್ರ, ೮ ಜನ ದ್ವಾರಪಾಲಕರು (ಜಯ, ವಿಜಯ, ಬಲ, ಪ್ರಬಲ, ಕುಮುದ, ಕುಮುದಾಕ್ಷ, ನಂದ, ಸುನಂದ), ೮ ಜನ ಗಂಧರ್ವರು (ತುಂಬುರು, ಚಿತ್ರಕೇತು, ಚಿತ್ರರಥ, ಚಿತ್ರಸೇನ, ಚಿತ್ರರೂಪ, ಕಿಶೋರ, ಬಲಿ, ಗೋಪಾಲ), ಚಿತ್ರಗುಪ್ತರು, ವಿಶ್ವಕರ್ಮ, ಯಜ್ಞ (ಸಾಧನಾಭಿಮಾನಿ ದೇವತೆಗಳು), ಊರ್ವಶ್ಯಾದಿ ಅಪ್ಸರೆಯರು, ಅರ್ಚಿರ, ಧೂಮ (ಮಾರ್ಗ ದೇವತೆಗಳು), ಭೀಮಸೇನ ದೇವರ ೨೦ ಪತ್ನಿಯರು, ಉತ್ತಮ ದೇವತೆಗಳಿಗೆ ವಾಹನರಾದ ದೇವತೆಗಳು (ನಂದಿ, ಹಂಸ, ಇತ್ಯಾದಿ), ಚಂಡಕ, ಸುಧಾಮ (ವಿಷ್ಣು ಪಾರ್ಷದರು), ಸಪ್ತ ಪಿತೃಗಳು (ಯಮ, ಸೋಮ, ಕವ್ಯವಾಹನ, ಅಗ್ನಿಷ್ವಾತ, ಅರ್ಯಮ, ಅನಳ, ಬರ್ಹಿಷತ್)

೨೦. ವರುಣ ಪತ್ನಿ ಗಂಗಾದೇವಿ, ಯಮ ಪತ್ನಿ ಶಾಮಲಾ, ಸೂರ್ಯ ಪತ್ನಿ ಸಂಜ್ಞಾ, ಚಂದ್ರ ಪತ್ನಿ ರೋಹಿಣಿ, ಪರ್ಜನ್ಯ ನಾಮಕ ಸೂರ್ಯ (ಮೇಘಾಭಿಮಾನಿ), ಕಾಮ ಪುತ್ರ ಅನಿರುದ್ಧನ ಪತ್ನಿ ಉಷಾ (ವಿರಾಟ್ ಉಷಾ ಎಂದು ಹೆಸರು)

೨೧. ಕೂರ್ಮ ಇತ್ಯಾದಿ ಅನಾಖ್ಯಾತ ದೇವತೆಗಳು

೨೨. ಮಂತ್ರಾಭಿಮಾನಿ - ಅಗ್ನಿ ಪತ್ನಿ ಸ್ವಾಹಾದೇವಿ

೨೩. ಸ್ವದೋದಕಾಭಿಮಾನಿ ಬುಧ (ಚಂದ್ರನ ಮಗ)

೨೪. ಉಷಾ (ಅಶ್ವಿನಿ ದೇವತೆಗಳ ಪತ್ನಿ - ನಾಮಾಭಿಮಾನಿ), ದೇವಕಿ, ಯಶೋದಾ

೨೫. ಭೂದೇವಿ, ಶನೈಶ್ಚರ, ವಿವಸ್ವಾನ್, ಸೂರ್ಯನ ಮಗ ಜಯಂತ (ಪೃಥ್ವಿ ತತ್ವಕ್ಕೆ ಅಭಿಮಾನಿಗಳು)

೨೬. ಪುಷ್ಕರ (ಕರ್ಮಾಭಿಮಾನಿ)

೨೭. ಅಜಾನಜ ದೇವತೆಗಳು (ಸಿದ್ದರು, ಸಾಧ್ಯರು, ಗುಹ್ಯಕರು, ಕಿನ್ನರರು, ಕಿಂಪುರುಷರು, ೩೦ ಚಾರಣರು, ೭೦ ಯಕ್ಷರು, ೩೦ ರಾಕ್ಷಸರು, ವಿದ್ಯಾಧರರು, ನಾಗರು, ೧೦೦ ಜನ ಅಪ್ಸರಾ ಸ್ತ್ರೀಯರು,

೧೦೦ ಜನ ಗಂಧರ್ವರು, ೧೦೦ ಮಂದಿ ಅಂಗಾಂಗ ಸಂಗಿಗಳಾದ ಗೋಪಿಕಾ ಸ್ತ್ರೀಯರು, ಶತನ್ಯೂನ ಶತಕೋಟಿ ಋಷಿಗಳು (೧೦೦ ಕಡಿಮೆ ೧೦೦ ಕೋಟಿ ಋಷಿಗಳು)

೨೮. ಚಿರ ಪಿತೃಗಳು

೨೯. ದೇವಗಂಧರ್ವರು

೩೦. ಮನುಷ್ಯ ಗಂಧರ್ವರು

೩೧. ಮನುಷ್ಯ ಚಕ್ರವರ್ತಿಗಳು (ರಾಜರು)

೩೨. ಮಾನುಷೋತ್ತಮರು, ಪಶುಗಳು (ಭೂಚರ), ಪಕ್ಷಿಗಳು (ಖೇಚರ), ಕ್ರಿಮಿ ಕೀಟಗಳು (ಜಲಚರ), ಸ್ಥಾವರ ಜೀವಿಗಳು, ವೃಕ್ಷ - ಲತಾ - ಗುಲ್ಮಗಳು.

*********************